

ಕರೆತಂದಿದ್ದ. ಆಗ ಹೆಚ್ಚೂ ಕಡಿಮೆ ಎರಡು ವಾರ ಊರಲ್ಲೇ ಉಳುಕಂಡಿದ್ದ. ಆ ಗೆಳೆಯನಿಗೆ ತನ್ನೂರಿನ ಸುತ್ತಮುತ್ತಲಿನ ತನ್ನಿಷ್ಟದ ತಾಣಗಳಲ್ಲೆಲ್ಲಾ ಅಡ್ಡಾಡಿಸಿದ್ದ. ಹಾಗೊಂದು ದಿನ ಅಡ್ಡಾಡುವಾಗ ಆ ಊರಿಂದ ಪಡುವಲ ದಿಕ್ಕಿಗಿರುವ ಬಾರೆಯನ್ನು ತಟಾಯ್ದು ಅಲ್ಲಿರುವ ಪುಟ್ಟ ಕೆರೆಯ ತಡಿಯ ಗುಡಿಗೂ ಕರೆದೊಯ್ದಿದ್ದ. ಗುಡಿಯನ್ನು ನೋಡಿಯಾದ ಮೇಲೆ ಅದರ ಹಿಂದಕ್ಕೆ ಹಲವು ಮೈಲಿಗಳವರೆಗೂ ಹರವಿಕೊಂಡಿದ್ದ ಕಾಡನ್ನು ತೋರಿಸುತ್ತಾ ಅದನ್ನು ಊರವರು ಆಚೆ ಬಾರೆ ಅಂತ ಕರೆಯುತ್ತಾರೆ ಅಂತಲೂ ತಾನು ಚಿಕ್ಕವನಿದ್ದಾಗ ಅಲ್ಲಿಗೆ ಗೆಳೆಯರೊಡನೆ ದನಗಳನ್ನು ಮೇಯಿಸಲು ಹೋಗುತ್ತಿದ್ದೆನೆಂದೂ ಅಲ್ಲಿ ಊರವರ ಬಾಯಲ್ಲಿ ಕೋಡ್ಗಲ್ಲು ಅಂತ ಕರೆಯಲ್ಪಡುವ ಎತ್ತರದ್ದೊಂದು ಕಲ್ಲಿದೆ ಅಂತಲೂ ಅದನ್ನು ಹತ್ತಿ ನೋಡಿದರೆ ಸುತ್ತಲ ಕಾಡಿನ ಸೊಬಗನ್ನು ನೋಡುವುದೇ ಒಂದು ವೈಭೋಗ ಅಂತಲೂ ಹೇಳಿದ್ದ. ಬಾಲ್ರಾಜನ ಮಾತುಗಳನ್ನು ಕೇಳುತ್ತಲೇ ಆ ಗೆಳೆಯನಿಗೆ ಆ ಕೋಡ್ಗಲ್ಲಿನ